ಈ) ಹೌದು. ಜಾಹಿರಾತಿನ ಕ್ಷೇತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಪರಿಣತಿ ಹೊಂದಿದ್ದಾರೆ.

ಬಿಜಾಪುರ ಜಿಲ್ಲೆಯಲ್ಲಿ ವಿಜ್ಞಾನ ಕೇಂದ್ರವನ್ನು ಪ್ರಾರಂಭಿಸುವುದು.

2088 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಎಷ್ಟು ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ?*

ಆ) *ಬಿಜಾಪುರ ಜಿಲ್ಲೆ ಬೀಳಗಿ ಮತಕ್ಷೇತ್ರದಲ್ಲಿ ಕನಿಷ್ಟ 10 ಹೈಸ್ಕೂಲುಗಳು, ಜೂ. ಕಾಲೇಜ್, 1ನೇ ಗ್ರೇಡ್ ಕಾಲೇಜು, ಇದ್ದು, ಇಲ್ಲಿ ಈ ಸಂಸ್ಥೆಗಳಿಗೆ ಅನುದಾನ ಸಹಿತ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗುವುದೆ?*

ಇ) *ಇಲ್ಲದಿದ್ದಲ್ಲಿ ಎಂದು ಪ್ರಾರಂಭಿಸಲಾಗುವುದು.*

ಶ್ರೀ ಪಿ.ಸಿ. ಸಿದ್ದನಗೌಡರು (ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಬಿಜಾಪುರ ಜಿಲ್ಲೆಯಲ್ಲಿ ಎರಡು ಶಾಲಾ ವಿಜ್ಞಾನ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಅವುಗಳ ವಿವರ :-

1) ಸರ್ವೋದಯ ಫ್ರೌಡ ಶಾಲೆ, ಬಸವನ ಬಾಗೇವಾಡಿ, ಬಿಜಾಪುರ.

2) ಶ್ರೀ ವಿಜಯಮಾಂತೇಶ ಫ್ರೌಡಶಾಲೆ, ಕ್ರಾಂತಿ ವೃತ್ತದ ಬಳಿ, ಇಳಕಲ್, ಹುನಗುಂದ ತಾ. ಬಿಜಾಪುರ ಜಿಲ್ಲೆ.

ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ ಪ್ರಾರಂಭಿಸಲಾದ 18 ವಿಜ್ಞಾನ ಘಟಕಗಳು ಬಿಜಾಪುರ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಅವುಗಳ ವಿವರಗಳನ್ನು ಅನುಬಂಧ -1ರಲ್ಲಿ ಕೊಡಲಾಗಿದೆ.

(ಆ) ಮತ್ತು (ಇ) ಬೀಳಗಿ ಕ್ಷೇತ್ರದ ತೆಗ್ಗಿ ಹಾಗೂ ಗೋಟೆ ಗ್ರಾಮಗಳಲ್ಲಿ ವಿಜ್ಞಾನ ಕೇಂದ್ರ ತೆರೆಯಲು ಬಂದಿರುವ ಮನವಿಯ ಸರ್ಕಾರದ ಪರಿಶೀಲನೆಯಲ್ಲಿದೆ.

ಅನುಬಂಧ - 1

1.	ಶ್ರೀ ರಾಮಲಿಂಗೇಶ್ವರ ಹೈಸ್ಕೂಲ್, ಕುಂಡರಗಿ, ಬಿಜಾಪುರ ಜಿಲ್ಲೆ.	10.	ಶ್ರೀ ಕಾಳಿದಾಸ ಕಾಂಪ್. ಪ್ರೀ-ಯೂನಿವರ್ಸಿಟಿ ಕಾಲೇಜು, ಬಾಗಲಕೋಟೆ, ಬಿಜಾಪುರ ಜಿಲ್ಲೆ.

2. ಆರ್.ಎಂ.ಜಿ. ಪ್ರೀ ಯುನಿವರ್ಸಿಟಿ ಕಾಲೇಜ್, ಮುಧೋಳ-587 313, ಬಿಜಾಪುರ ಜಿಲ್ಲೆ.

3. ಆರ್.ಟಿ. ದೇಸಾಯಿ ಗೌವರ್ನಮೆಂಟ್ ಪಿ.ಯು.ಕಾಲೇಜ್, ನೀರಬೂದಿಹಾಳ್ ತಾ: ಬಾದಾಮಿ, ಬಿಜಾಪುರ ಜಿಲ್ಲೆ.

4. ಶ್ರೀ ರುಕ್ಮಣಗಡಾ ಹೈಸ್ಕೂಲ್, ದಿವಾತಾಗಿರಿ, ಬಿಜಾಪುರ ಜಿಲ್ಲೆ.

5. ಶ್ರೀ ವೀರಭದ್ರೇಶ್ವರ ಟೆಂಪಲ್ ಜುನಜುರಾಕೊಪ್ಪ, ಮುದೋಳ, ಬಿಜಾಪುರ.

6. ಎಸ್.ಜಿ.ಪ್ರೀ ಯುನಿವರ್ಸಿಟಿ ಕಾಲೇಜ್, ಗೊಳಗೇರಿ, ಸಿಂಧಗಿ ತಾ: ಬಿಜಾಪುರ ಜಿಲ್ಲೆ

7 ಎಸ್.ಜಿ.ಎಸ್.ಡಿ.ಜೆ. ಹೈಸ್ಕೂಲ್ ಮಸೂತಿ ಲಾ. ಬಸವನಬಾಗೇವಾಡಿ, ಬಿಜಾಪುರ ಜಿಲ್ಲೆ.

8. ಗೌವರ್ನಮೆಂಟ್ ಹೈಸ್ಕೂಲ್, ತೆಗ್ಗಿ, ತಾಲ್ಲೂಕು ಬೀಳಗಿ. ಬಿಜಾಪುರ ಜಲ್ಲೆ.

9. ಶ್ರೀ ಹುಚ್ಚೇಶ್ವರ ಹೈಸ್ಕೂಲು, ಕಮಟಗಿ, ಹುನಗುಂದ ತಾ. ಬಿಜಾಪುರ ಜಿಲ್ಲೆ - 587120.

11. ಅಲ್-ಭಗವಾನ್ ಕನ್ನಡ ಹೈಸ್ಕೂಲ್, ಭಗವಾನ್ ಟಾಲ್,ಬಾಗಲಕೋಟೆ, ಬಿಜಾಪುರ. 587 101.

12. ಎನ್.ವಿ.ಹೈಸ್ಕೂಲ್, ಮಸೂತಿ, ಟಿ. ಬಸವನಬಾಗೇವಾಡಿ. ಬಿಜಾಪುರ ಜಿಲ್ಲೆ.

13. ಎಸ್.ವಿ.ಹೈಸ್ಕೂಲ್, ಹಲಗಲಿ ಪೋಸ್ಟ,ಬಿಜಾಪುರ ಜಿಲ್ಲೆ.

14. ಬಾಲಭಾರತಿ ವಿದ್ಯಾಮಂದಿರ್, ತಾಳಿಕೋಟೆ, ಬಿಜಾಪುರ ಜಿಲ್ಲೆ.

15. ನ್ಯೂ ಹೈಸ್ಕೂಲ್, ಗುಣದಾಲಾ, ಬಿಜಾಪುರ ಜಿಲ್ಲೆ.

16. ವಿ.ಎಂ.ಎಸ್.ಆರ್.ವಿ.ಆರಟ್ಸ ಮತ್ತು ಸೈನ್ಸ ಕಾಲೇಜು, ಹುನಗುಂದ, ಬಿಜಾಪುರ.

17. ಎ.ಆರ್.ಹಿರೇಮಠ ಹೈಸ್ಕೂಲ್ ಕೆರೂರು, ಬಾದಾಮಿ ತಾ. ಬಿಜಾಪುರ ಜಿಲ್ಲೆ-587206.

18. ಶ್ರೀ ಗುರುಲಿಂಗೇಶ್ವರ ಹೈಸ್ಕೂಲ್, ಕಲಾಡಗಿ, ಬಾಗಲಕೋಟೆ, ಬಿಜಾಪುರ ಜಿಲ್ಲೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕುರಿತು.

2089 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ 95-96ನೇ ಸಾಲಿನಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಹಣವೆಷ್ಟು? ಅದನ್ನು ಯಾವ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ?